

## ಬೇಬಿ ಕಾರ್ನ್

ರಜೆಗೆ ಹಳ್ಳಿಗೆ ಹೋಗಿದ್ದ ನಾವು ಮಕ್ಕಳೊಂದಿಗೆ ಹೊಲಕ್ಕೆ ಹೋದೆವು. ಅಲ್ಲಿ ಜೋಳದ ತೆನೆ ನೋಡಿದ ನನ್ನ ತಂಗಿ ಮಗ ಪುಟಾಣಿ ಪ್ರಜ್ವಲ್, 'ದೊಡ್ಡಮ್ಮ, ಇದು ಬೇಬಿ ಕಾರ್ನ್?' ಎಂದು ಪ್ರಶ್ನಿಸಿದ. ಅದಕ್ಕೆ ನಾನು 'ಅಲ್ಲಪ್ಪಾ ಅದು...' ಎಂದು ಹೇಳುವ ಮೊದಲೆ 'ಓ... ಹಾಗಾದ್ರೆ ಅದು ಅಡಲ್ಟ್ ಕಾರ್ನಾ!...' ಎಂದು ಅವನೇ ವಾಕ್ಯ ಪೂರ್ಣಗೊಳಿಸಿದ.

**'ಸುಮಾ ಕಳಸಾಪುರ'**

## ಮಾರಿ ಹಬ್ಬಕ್ಕೆ ಡ್ರೆಸ್ಸು!

ನನ್ನ ತಮ್ಮನ ಮಗಳು ನಾಲ್ಕು ವರ್ಷದ 'ಶುಭದಾ' ತುಂಬಾ ತುಂಟಿ. ಇತ್ತೀಚೆಗೆ ನಮ್ಮ ಮನೆಗೆ ಬಂದಿದ್ದಳು. 'ದೊಡ್ಡಪ್ಪಾ... ನನಗೆ ಲಂಗ ಬ್ಲೌಸು ತಕ್ಕೊಡು...' ಎಂದು ನನಗೆ ಹೇಳಿದಳು.

'ಲಂಗಾ ಬ್ಲೌಸಾ? ಯಾಕೆ?' ಎಂದೆ.

'ಲಂಗಾ ಬ್ಲೌಸು ಹೊಸ ಡ್ರೆಸ್ಸು ದೊಡ್ಡಪ್ಪಾ.... ಮಾರಿ ಹಬ್ಬಕ್ಕೆ ತಕ್ಕೊಡು ದೊಡ್ಡಪ್ಪಾ' ಎಂದಳು!

'ಮಾರಿ ಹಬ್ಬಕ್ಕೆ ಹೊಸ ಡ್ರೆಸ್ಸಾ?' ಎಂದು ಆಶ್ಚರ್ಯಪಟ್ಟು ಕೇಳಿದೆ!

'ಹೌದು ದೊಡ್ಡಪ್ಪಾ ಮಾರಿ ಹಬ್ಬಕ್ಕೆ ಲಂಗ ಬ್ಲೌಸು!' ಎಂದಳು.

ನಂತರ ತಿಳಿಯಿತು. ಅದು ಮಾರಿಹಬ್ಬ ಅಲ್ಲ... ಗೌರಿ ಹಬ್ಬ ಎಂದು! 'ಗೌರಿ ಹಬ್ಬ' ಎಂದು ಹೇಳುವ ಬದಲು 'ಮಾರಿ ಹಬ್ಬ' ಎಂದಿದ್ದಳು ಆಕೆ!

**ಪಿ.ಜೆ. ರಾಘವೇಂದ್ರ**



ಚಿತ್ರಗಳು: ಗಣೇಶ ಆಚಾರ್ಯ